## ಅಚಾತುರ್ಯ!

ಪರವೂರಿಗೆ ನೆಂಟರ ಮನೆಗೆ ಆಗಮಿಸಿದ್ದ ಗುಂಡ ಒಬ್ಬಂಟಿಯಾಗಿ ಊರು ಸುತ್ತುತ್ತಾ ಒಂದು ನದಿ ಕಡೆ ಬಂದು ತಲುಪಿದ. ನದಿಯ ಮಧ್ಯಭಾಗದಲ್ಲಿ ಸೂಚನಾ ಫಲಕವೊಂದು ಕಂಡುಬಂತು. ಅದನ್ನು ಓದಲು ಪ್ರಯತ್ನಿಸಿದ. ಆದರೆ, ಆತ ಕನ್ನಡಕ ಮರೆತು ಬಂದಿದ್ದರಿಂದ ಬರಹ ಸ್ಪಷ್ಟವಾಗಿ ಕಾಣಿಸಲಿಲ್ಲ. ಹಾಗಾಗಿ, ನದಿಗೆ ಹಾರಿ, ಈಜುತ್ತಾ ಆ ಫಲಕದೆದುರು ಬಂದು ಓದಲಾರಂಭಿಸಿದ, 'ಈ ನದಿಯಲ್ಲಿ ಅಪಾಯಕಾರಿ ಮೊಸಳೆಗಳಿವೆ. ನೀರಿಗಿಳಿಯಬೇಡಿ!' ಎಂದು ಅಲ್ಲಿ ಬರೆಯಲಾಗಿತ್ತು. ಮುಂದೇನು ಮಾಡುವುದೆಂದು ತಿಳಿಯದೇ ನೀರೊಳಗಿದ್ದೂ ಬೆವರಿದ ಗುಂಡ.

**ರಮಣ್ ಶೆಟ್ಟಿ ರೆಂಜಾಳ್**



## ಚೌಕಾಸಿ

ರಮಣ ಹಾಗೂ ರಾಣಿ ತರಕಾರಿ ತರಲು ಮಾರುಕಟ್ಟೆಗೆ ಹೋಗಿದ್ದರು. ತರಕಾರಿ ಖರೀದಿ ಎಲ್ಲಾ ಮುಗಿದ ಮೇಲೆ ಕೊನೆಯಲ್ಲಿ ರಾಣಿ ಸೀಬೆಹಣ್ಣು ನೋಡಿದಳು. ಕೈಯಲ್ಲಿ ತರಕಾರಿ ಚೀಲಗಳು ಇದ್ದಿದ್ದರಿಂದ ಎಡಗಡೆ ಗಾಡಿ ಇಳಿದು ಬಲಗಡೆ ಇದ್ದ ಸೀಬೆಹಣ್ಣು ತರುವಂತೆ ಗಂಡ ರಮಣನಿಗೆ ಹೇಳಿದಳು. ರಮಣನಿಗೆ ಚೌಕಾಸಿ ಬರುವುದಿಲ್ಲವೆಂದು ಗೊತ್ತಿದ್ದ ರಾಣಿ, 'ಇಲ್ನೋಡಿ, ಅವರು ನೂರು ರೂಪಾಯಿಗೆ ಆರು ಕಾಯಿ ಅಂದರೆ, ನೀವು ಎಂಟು ಕೊಡಿ ಅಂತ ವಾದ ಮಾಡಬೇಕು. ಇಲ್ಲ ಅಂದ್ರೆ ಒಂದೆರಡು ಹೆಜ್ಜೆ ಮುಂದೆ ಬಂದಂತೆ ಮಾಡಿ. ಆಗ ಅವರೇ ಕರೆದು ಕೊಡ್ತಾರೆ...' ಎಂದು ತಾಕೀತು ಮಾಡಿದಳು. 'ನೂರಕ್ಕೆ ಎಷ್ಟು?' ಎಂದ ರಮಣ. 'ಹತ್ತು' ಅಂದಳು ಸೀಬೆಹಣ್ಣು ಮಾರುವವಳು. 'ಇಲ್ಲ ಎಂಟು ಕೊಡಿ, ಇಲ್ಲದಿದ್ರೆ ನಾನು ಎರಡು ಹೆಜ್ಜೆ ಮುಂದೆ ಹೋದಂತೆ ಮಾಡ್ತೀನಿ, ಆಗ ನೀವೇ ಕರೆದು ಕೊಡ್ತೀರಿ... ನಂಗೊತ್ತಿಲ್ಲವಾ?' ಎಂದ. ಅವಳು ಮುಸಿಮುಸಿ ನಗುತ್ತ ಎಂಟು ಹಣ್ಣು ಕಟ್ಟಿಕೊಟ್ಟಳು.

**ಅನುಪಮಾ ವಸ್ತದ**



ಕಲೆ: ಗಣೇಶ ಆಚಾರ್ಯ